Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986




THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

Volume 39 | Issue - 28 | 02th January 2025

## ಕ್ಲಬ್ ಅಸೆಂಬ್ಲಿ

Time : 7.00 p.m.
Venue : Hotel Shivaprasad Grand, Kundapura

39th year of Service and Fellowship

## ವಾರದ ವರದಿ



ಕಳೆದ ವಾರದ ನಮ್ಮ ಸಾಪ್ತಾಹಿಕ ಸಭೆಯು ತಾ. 29ರಂದು ಕುಂದಾಪುರದ ಆರ್. ಎನ್. ಶೆಟ್ಟಿ ಹಾಲ್‌ನ ಜಿ. ಕುಶಲ ಹೆಗ್ಡೆ ಸಭಾಂಗಣದಲ್ಲಿ ನಡೆಸಲಾಯಿತು. ನಮ್ಮ ಹಿರಿಯ ಸದಸ್ಯರಾದ ರೊ. ಜಿ. ಶ್ರೀಧರ ಶೆಟ್ಟಿ ಹಾಗೂ ಆ್ಯನ್ ಶಾಲಿನಿ ಶೆಟ್ಟಿ ದಂಪತಿಯ 50ನೆಯ ವಿವಾಹ ವಾರ್ಷಿಕೋತ್ಸವದ ಸುವರ್ಣ ಮಹೋತ್ಸವವನ್ನು ಅವರ ಕುಟುಂಬದವರು ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಸದಸ್ಯರೊಂದಿಗೆ ನಮ್ಮ ಸಾಪ್ತಾಹಿಕ ಸಭೆಯಲ್ಲಿ ಆಚರಿಸಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ರೊ. ಜಿ. ಶ್ರೀಧರ್ ಶೆಟ್ಟಿ ದಂಪತಿಗಳನ್ನು ವೇದಿಕೆಗೆ ಆಹ್ವಾನಿಸಿ ಕುಟುಂಬಸ್ಥರಿಗೆ ಮತ್ತು ರೋಟರಿ ಸದಸ್ಯರಿಗೆ ಆತ್ಮೀಯವಾಗಿ ಸ್ವಾಗತಿಸಿದರು. ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯವೆಸಗಿದ ರೊ. ವಿವಿಯನ್ ಕ್ರಾಸ್ಟೋರವರು ಕಳೆದ ವಾರದ ವರದಿಯನ್ನು ಸಭೆಗೆ ನೀಡಿದರು. ವಾರದ ಚಿಂತನೆಯನ್ನು ನೀಡಿದ ರೊ. ಮಹೇಂದ್ರ ಶೆಟ್ಟಿಯವರು “ಜೀವನದಲ್ಲಿ ಯಾರಿಗೂ ಯಾವ ರೀತಿಯ ಉಪಕಾರವನ್ನೂ ಮಾಡದವರು, ಸಂತರ ಮುಖವಾಡದಲ್ಲಿ ಎಷ್ಟೇ ವಿಜೃಂಭಿಸಿದರೂ ದೇವರ ಮುಂದೆ ಅದು ವ್ಯರ್ಥ. ಅದರ ಬದಲು ಸಮಾಜ ಸೇವೆಗಾಗಿಯೇ ತಮ್ಮ ಜೀವಮಾನದ ಗಳಿಕೆಯನ್ನು ಹಾಗೂ ಶ್ರಮವನ್ನು ಈ ಇಳಿವಯಸ್ಸಿನಲ್ಲಿ ಸಮಾಜಕ್ಕಾಗಿ ವ್ಯಯಿಸುತ್ತಿರುವ ರೊ. ಜಿ. ಶ್ರೀಧರ್ ಶೆಟ್ಟಿಯವರ ಇಚ್ಛಾಶಕ್ತಿ ನಮಗೆಲ್ಲಾ ಮಾದರಿ” ಎಂದರು. ರೋಟರಿ ಮಾಹಿತಿ ನೀಡಿದ ರೊ. ಕೆ. ಕೆ. ಕಾಂಚನ್‌ರವರು “1905ರಲ್ಲಿ ನಾಲ್ಕು ಸ್ನೇಹಿತರು ಹುಟ್ಟುಹಾಕಿದ ರೋಟರಿ ಸಂಸ್ಥೆಯು ಇಂದು 200 ದೇಶಗಳಲ್ಲಿ ಪಸರಿಸಿ, 12 ಮಿಲಿಯಕ್ಕೂ ಅಧಿಕ ಸದಸ್ಯತ್ವವನ್ನು ಹೊಂದಿದ್ದು, ಪ್ರಪಂಚದಲ್ಲಿ ಮಾಡಿದ ಪಾರದರ್ಶಕ ಸೇವೆಗಾಗಿ 4 star ಮೌಲ್ಯವನ್ನು ಹೊಂದಿದ ಮುಂಚೂಣಿಯ ಸಂಸ್ಥೆಯಾಗಿದೆ” ಎಂದು ನೆರೆದ ಸಭಿಕರಿಗೆ ರೋಟರಿಯ ಅಗಾಧತೆ ಮತ್ತು ಜನಪ್ರಿಯತೆಯನ್ನು ಚುಟುಕಾಗಿ ವಿವರಿಸಿದರು. ನಂತರ ಅಧ್ಯಕ್ಷರು, ಕಳೆದ ವಾರ ಉಡುಪಿಯಲ್ಲಿ ನಡೆದ ಜಿಲ್ಲಾ ರೋಟರಿ ಕ್ರೀಡೋತ್ಸವದಲ್ಲಿ ವಿಜೇತರಾದ ನಮ್ಮ ಕ್ಲಬ್ಬಿನ ಸದಸ್ಯರಿಗೆ ಸಭೆಯಲ್ಲಿ ಪದಕಗಳನ್ನು ವಿತರಿಸಿ ಗೌರವಿಸಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ತಮ್ಮ ನುಡಿಯಲ್ಲಿ “ರೊ. ಜಿ. ಶ್ರೀಧರ ಶೆಟ್ಟಿಯವರು ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಲ್ಲಿ ಸೇವೆಗೆ ಪ್ರಾಮುಖ್ಯತೆಯನ್ನು ನೀಡಿದುದರಿಂದ ಅವರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯದಿಂದಿರಲು ಸಾಧ್ಯವಾಗಿದೆ. ಇಂತಹ ಜೀವನ ನಮಗೆಲ್ಲಾ ಮಾದರಿ” ಎಂದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ವಂದನಾರ್ಪಣೆ ನೀಡಿ ರೋಟರಿಯ ಸಾಪ್ತಾಹಿಕ ಸಭೆಗೆ ವಿರಾಮವನ್ನು ನೀಡಿದರು.

ನಂತರ ರೊ. ಜಿ. ಶ್ರೀಧರ ಶೆಟ್ಟಿ ದಂಪತಿಗಳ 50ನೇ ವಿವಾಹ ಮಹೋತ್ಸವದ ಸುವರ್ಣ ಸಂಭ್ರಮದ ಕಾರ್ಯಕ್ರಮವನ್ನು ಮಾಜಿ ಅಸಿಸ್ಟೆಂಟ್ ಗವರ್ನರ್ ರೊ. ಡಾ. ಸಂದೀಪ ಶೆಟ್ಟಿಯವರು ಸುಂದರವಾಗಿ ನಿರ್ವಹಿಸಿದರು. ಮಲ್ಲಿಗೆ ಹೂವಿನ ಹಾರ ವಿನಿಮಯ ಮಾಡಿಕೊಂಡ ನಮ್ಮ ಹಿರಿಯ ದಂಪತಿಗಳಿಗೆ ನಮ್ಮ ರೊ. ಜಿ. ಸಂತೋಷ್ ಕುಮಾರ್ ಶೆಟ್ಟಿಯವರು ಕುಟುಂಬಸ್ಥರ ಪರವಾಗಿ ಅವರ ಬಾಳನ್ನು ಸಭೆಗೆ ವಿವರಿಸಿದರು. ರೋಟರಿ ಕ್ಲಬ್‌ನ ಪರವಾಗಿ ಅಭಿನಂದಿಸಿದ ಪಿಡಿಜಿ. ರೊ. ಅಭಿನಂದದನ್ ಶೆಟ್ಟಿಯವರು ರೊ. ಜಿ. ಶ್ರೀಧರ ಶೆಟ್ಟಿಯವರ ರೋಟರಿ ಜೀವನದ ಸಾಧನೆಗಳನ್ನು ಅವರ ಕುಟುಂಬಸ್ಥರಿಗೆ ತಿಳಿಸಿದರು. ನಂತರ ಸಾರ್ವಜನಿಕರ ಪರವಾಗಿ ಅಭಿನಂದಿಸಿ ಮಾತನಾಡಿದ ಶ್ರೀ ವಂಡಬಳ್ಳಿ ಜಯರಾಮ ಶೆಟ್ಟಿಯವರು ರೊ. ಶ್ರೀಧರ್ ಶೆಟ್ಟಿಯವರು ತಮ್ಮ ವಿಶ್ರಾಂತ ಜೀವನವನ್ನು ಗ್ರಾಮೀಣ ವಲಯವಾದ ವಂಡ್ಸೆಯಲ್ಲಿ ನಡೆಸಿ ಅವರಿಂದ ವಂಡ್ಸೆ ಗ್ರಾಮಕ್ಕೆ ಆದ ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿವರಿಸಿದರು. ಎಲ್ಲಾ ಅತಿಥಿಗಳು ರೊ. ಜಿ. ಶ್ರೀಧರ್ ಶೆಟ್ಟಿಯವರ ಹೃದಯ ಶ್ರೀಮಂತಿಕೆಯನ್ನು ಅನಾವರಣಗೊಳಿಸಿದರು. ಹಿರಿಯ ದಂಪತಿಗಳನ್ನು ಮುತ್ತೈದೆಯರು ಆರತಿ ಬೆಳಗಿಸಿ ಸೋಬಾನೆ ಹಾಡಿ ಗೌರವಿಸಿದರು. ರೋಟರಿ ಕ್ಲಬ್ಬಿನ ಪರವಾಗಿ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಎಲ್ಲಾ ಸದಸ್ಯರೊಂದಿಗೆ ಹಾಗೂ ಇನ್ನರ್‌ವ್ಹೀಲ್ ಕ್ಲಬ್‌ನ ಪರವಾಗಿ ಹಿರಿಯರಾಗಿರುವ ಆ್ಯನ್ ಅಂಬುಜಾ ಶೆಟ್ಟಿಯವರು ಎಲ್ಲರ ಸಮ್ಮುಖದಲ್ಲಿ ಬೃಹತ್ ಹೂವಿನ ಹಾರಗಳನ್ನು ದಂಪತಿಗೆ ತೊಡಿಸಿ ಗೌರವಿಸಿದರು. ನಂತರ ಉತ್ತರಿಸಿದ ರೊ. ಜಿ. ಶ್ರೀಧರ್ ಶೆಟ್ಟಿಯವರು “ತಾವು ವೃತ್ತಿಯಿಂದ ನಿವೃತ್ತರಾದ ಮೇಲೆ ರೋಟರಿಗೆ ಸೇರಿದುದರಿಂದ ಇಂದಿಗೂ ತಾರುಣ್ಯದ ವ್ಯಕ್ತಿತ್ವದಲ್ಲೇ ಕ್ರಿಯಾಶೀಲರಾಗಿರಲು ರೋಟರಿ ಹಾಗೂ ಅದರ ಸದಸ್ಯರು ಕಾರಣವೆಂದು ತಿಳಿಸಿದರು. ತಮ್ಮ ಈ ಕಾರ್ಯಕ್ರಮವನ್ನು ರೋಟರಿ ಸದಸ್ಯರೊಂದಿಗೆ ಹಾಗೂ ಕುಟುಂಬದವರೊಂದಿಗೆ ಸಂಭ್ರಮಿಸಲು ತಮ್ಮ ಮಕ್ಕಳು, ಅಳಿಯ, ಸೊಸೆ ಹಾಗೂ ಮೊಮ್ಮಕ್ಕಳು ನೀಡಿದ ಸಹಕಾರವನ್ನು ಅಭಿಮಾನದಿಂದ ಹೇಳಿದರು. ಪುತ್ರಿ ರಶ್ಮಿ ಶೆಟ್ಟಿಯವರು ಉತ್ತರಿಸುತ್ತಾ “ತಾನು ಮತ್ತು ತನ್ನ ತಮ್ಮ, ಚಿಕ್ಕಂದಿನಲ್ಲಿ ತಮ್ಮ ತಂದೆ ಮತ್ತು ತಾಯಿಯಿಂದ ಕಲಿತ ಉತ್ತಮ ಸಂಸ್ಕಾರಗಳು ಹಾಗೂ ಕಠಿಣ ಪರಿಶ್ರಮಿಕೆಯಿಂದ ಇಂದು ತಾವಿಬ್ಬರೂ ಅಮೇರಿಕಾದಲ್ಲಿ ಉತ್ತಮ ವೃತ್ತಿಯಲ್ಲಿ ಗೌರವದಿಂದ

ಬಾಳಲು ಸಾಧ್ಯವಾಗಿ, ಕುಟುಂಬದಲ್ಲಿ ಇತರರಿಗೂ ಪ್ರೇರಣೆಯನ್ನು ನೀಡಲು ಸಾಧ್ಯವಾಗಿರುವುದಕ್ಕೆ ತಂದೆ ತಾಯಿಯನ್ನು ಶ್ಲಾಘಿಸಿದರು. ವೇದಿಕೆಯ ಕಾರ್ಯಕ್ರಮದ ನಂತರ ಸಿಜ್ಲಿಂಗ್ ಗೈಸ್, ಮಂಗಳೂರು ತಂಡದಿಂದ ಸಂಗೀತ ಮತ್ತು ನಾಟ್ಯದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಉನ್ನತ ಮಟ್ಟದ ಭೋಜನವನ್ನು ಏರ್ಪಡಿಸಿದ ರೊ. ಜಿ. ಶ್ರೀಧರ ಶೆಟ್ಟಿ ದಂಪತಿಗಳಿಗೆ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಅದರ ಸದಸ್ಯರ ಮೇಲಿರುವ ಗೌರವ ಮತ್ತು ಬಾಂಧವ್ಯ ಒಂದು ಕೈಗನ್ನಡಿಯಾಗಿ ತೋರುತ್ತಿತ್ತು. ಈ ವರ್ಷದ ಧ್ಯೇಯ ವಾಕ್ಯ Magic of Rotaryಗೆ ಅನ್ವರ್ಥವೆಂಬಂತೆ ಈ ಸಾಲಿನ ಪ್ರತೀ ತಿಂಗಳುಗಳಲ್ಲಿ ನಡೆದ ರೋಟರಿ ಕುಟುಂಬ ಸಮ್ಮಿಲನಗಳು ಒಂದಕ್ಕಿಂತ ಒಂದು ವಿಭಿನ್ನವಾಗಿ ನಡೆದವು. ಇನ್ನೊಂದು ನೆನಪಿನಲ್ಲಿ ಉಳಿಯುವ ಒಂದು ಕುಟುಂಬ ಸಮ್ಮಿಲನವಾಗಿ ಇಂದಿನ ಕಾರ್ಯಕ್ರಮ ರೂಪುಗೊಳಿಸಿದ ರೊ. ಜಿ. ಶ್ರೀಧರ್ ಶೆಟ್ಟಿ ದಂಪತಿಗಳಿಗೆ ಧನ್ಯವಾದಗಳು.

## Rotary Information

Rotary was started by it's founder Paul Harris n 3 of his friends on 23rd Fed 1905 at Chicago USA. It has the presence in more than 200 countries n having nearly 12 million members across the globe. The Rotary Foundation is the largest private Trust in the world n has been awarded the 4 star rating by the Charity Nevigation for it's Transferency n commitment.

**By Rtn. K. K. Kanchan**

























Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96



Rtn. B. C. Somayaji 1997-98




Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04




Rtn. A. Shantharam Pai 2005-06

## ಕಳೆದ ವಾರದ ಚಿಂತನೆ

ಪ್ರೇಮದ ಪರಿಮಳವನ್ನು ಪಸರಿಸದವರು ದೇವರಿಗೆ
ಪಾರಿಜಾತ ಹೂವನ್ನಿತ್ತಿರೆ ಅದು ವ್ಯರ್ಥ.
ನಿರ್ಭಾಗ್ಯರ ಮನೆಯ ಅಂಧಕಾರವನ್ನು ಅಳಿಸದವರು
ದೇವರಿಗೆ ದೀಪವನ್ನು ಹಚ್ಚಿದರೆ ಅದೂ ವ್ಯರ್ಥ.
ಬಡವರ ಹೊಟ್ಟೆಗೆ ಒಂದು ಹೊತ್ತಿನ ಊಟವನ್ನು ನೀಡದವರು
ದೇವರಿಗೆ ನೈವೇದ್ಯವನ್ನು ಸಮರ್ಪಿಸಿದರೆ ಅದೂ ವ್ಯರ್ಥ.
ದೀನ ದಲಿತರ ನೋವನ್ನು ಕೇಳಿಸಿಕೊಳ್ಳದವರು
ಗುಡಿಯಲ್ಲಿ ಗಂಟೆ ಬಾರಿಸಿದರೆ ಅದು ಕೂಡಾ ವ್ಯರ್ಥ.
ಆದುದರಿಂದ ತಮ್ಮ ದುಡಿಮೆ, ಗಳಿಕೆ ಮತ್ತು ಉಳಿಕೆಯನ್ನು ಸಮಾಜದ
ಕಲ್ಯಾಣಕ್ಕಾಗಿ ಅರ್ಪಿಸುತ್ತಿರುವ ರೊ. ಜಿ. ಶ್ರೀಧರ ಶೆಟ್ಟಿಯಂತವರು
ದೇವರಿಗೂ ಹತ್ತಿರ. ನಮಗೂ ಮಾದರಿ.

ನೀಡಿದವರು : ರೊ. ಮಹೇಂದ್ರ ಶೆಟ್ಟಿ

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 30–12–2024ನೇ ಸೋಮವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿದ ರೊ. ಅನಿಲ್ ಡಿ'ಸಿಲ್ವಾ ಮತ್ತು ಆನ್ ಜೆನ್ನಿಫರ್ ಡಿ'ಸಿಲ್ವಾರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9343356533



ತಾ. 03–01–2025ನೇ ಶುಕ್ರವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ರೇಗನ್ಸ್ ಲೋಬೋ ಮತ್ತು ಆನ್ ಪ್ರಿನ್ಸಿಯಾ ಲೋಬೋರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9901319947

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಅರುಣ್ ಕುಮಾರ್ ಶೆಟ್ಟಿ**
ದಿನಾಂಕ : ಜನವರಿ 4
ಮೊಬೈಲ್ : 9880295366

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com



Rtn. S. Sadananda Chatra 1996-97



Rtn. K. Suresh Kamath 1998-99




Rtn. S. Vijaya Shetty 2000-01



Rtn. U. S. Shenoy 2002-03



Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24

*This Bulletin is sponsored by :*
**Rtn. Raghavendra Bhat**
Mob. : 9448151855